ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ ದಿನಾಂಕ : DATE : 16/07/2019

# ಪ್ರತಿಪಕ್ಷದಲ್ಲಿ ಕೂರಲು ಸಿದ್ಧರಾಗೋಣ

## ಸಿಎಲ್‌ಪಿಯಲ್ಲಿ ಶಾಸಕರ ಅಭಿಪ್ರಾಯ | ಡಿಕೆಶಿಗೆ ಸರಕಾರ ಉಳಿಯುವ ಭರವಸೆ

**ವಿಕ ಸುದ್ದಿಲೋಕ** ಬೆಂಗಳೂರು 16/7

ವ್ಯರ್ಥ ಕಸರತ್ತು ಬಿಡಿ. ಜೆಡಿಎಸ್‌ಗೆ ನೀಡಿದ ಬೆಂಬಲ ಹಿಂಪಡೆಯುವ ದಿಟ್ಟ ನಿರ್ಧಾರ ಕೈಗೊಂಡು ಪಕ್ಷವನ್ನು ಉಳಿಸಿ ಎಂದು ಕಾಂಗ್ರೆಸ್ ಶಾಸಕರು ತಮ್ಮ ನಾಯಕರ ವಿರುದ್ಧ ಚಾಟಿ ಬೀಸಿದ್ದಾರೆ.

ಶಾಸಕರು ತಂಗಿರುವ ಖಾಸಗಿ ಹೋಟೆಲ್‌ನಲ್ಲಿ ಸೋಮವಾರ ಬೆಳಗ್ಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ(ಸಿಎಲ್‌ಪಿ) ಸಭೆ ನಡೆಯಿತು. ಮಾಜಿ ಸಿಎಂ ಸಿದ್ದರಾಮಯ್ಯ, ಡಿಸಿಎಂ ಜಿ.ಪರಮೇಶ್ವರ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ಕೆ.ಸಿ.ವೇಣುಗೋಪಾಲ್, ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್ ಸೇರಿ ಪ್ರಮುಖರು ಭಾಗಿಯಾಗಿದ್ದರು. ಈ ನಾಯಕರ ಸಮ್ಮುಖದಲ್ಲೇ ಕೋಪತಾಪ ಪ್ರದರ್ಶಿಸಿದ ಶಾಸಕರು, ಸರಕಾರ ಈಗಾಗಲೇ ಅಲ್ಪಮತಕ್ಕೆ ಕುಸಿದಿದೆ. ಇನ್ನು ಎಷ್ಟೇ ತೇಪೆ ಹಚ್ಚಿದರೂ ಪ್ರಯೋಜನವಾಗುವುದಿಲ್ಲ. ಈ ನಡುವೆಯೂ ಸರಕಾರ ಉಳಿಸಿಕೊಳ್ಳುವ ಕಸರತ್ತು ಮುಂದುವರಿಸಿರುವುದು ಏಕೆಂದು ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ. ಶಾಸಕರನ್ನು ನಿಯಂತ್ರಿಸಲು ಸಿದ್ದರಾಮಯ್ಯ ಮುಂದಾದರೂ ಉಪಯೋಗವಾಗಲಿಲ್ಲ. ''ಪ್ರತಿ ಬಾರಿಯೂ ನೀವು ಹೇಳುವುದನ್ನು ಕೇಳುವುದಷ್ಟೇ ನಮ್ಮ ಕೆಲಸವಲ್ಲ, ನಮ್ಮ ಅಭಿಪ್ರಾಯಕ್ಕೂ ಬೆಲೆ ಕೊಡಿ,'' ಎಂದು ಶಾಸಕರು ತಿರುಗಿ ಬಿದ್ದರೆಂದು ಗೊತ್ತಾಗಿದೆ.

**ಎಚ್‌ಡಿಕೆ, ರೇವಣ್ಣ ವಿರುದ್ಧ ಕಿಡಿಕಿಡಿ:** ಸಿಎಂ ಎಚ್.ಡಿ.ಕುಮಾರಸ್ವಾಮಿ, ಸಚಿವ ಎಚ್.ಡಿ.ರೇವಣ್ಣ ಧೋರಣೆಗೆ ಕಿಡಿಕಿಡಿಯಾದ ಶಾಸಕರು, ''ಕುಮಾರಸ್ವಾಮಿ ಯಾವತ್ತೂ ನಮ್ಮ ಕ್ಷೇತ್ರ ಅಭಿವೃದ್ಧಿಗೆ ಸ್ಪಂದಿಸಿಲ್ಲ. ಅಧಿಕಾರ ಕಳೆದುಕೊಳ್ಳುವ ಆತಂಕದಿಂದ ಈಗ ನಮ್ಮ ಬಳಿಗೆ ಬರುತ್ತಿದ್ದಾರೆ. ಇಡೀ ಸರಕಾರದಲ್ಲಿ ರೇವಣ್ಣ ಹಸ್ತಕ್ಷೇಪ ಮಾಡಿದರೂ ತಡೆಯಲಿಲ್ಲ,'' ಎಂದು ವಾಗ್ದಾಳಿ ನಡೆಸಿದರೆಂದು ಹೇಳಲಾಗಿದೆ.



ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ದಿನೇಶ್ ಗುಂಡೂರಾವ್, ಉಪಮುಖ್ಯಮಂತ್ರಿ ಡಾ. ಜಿ.ಪರಮೇಶ್ವರ್ ನೇತೃತ್ವದಲ್ಲಿ ಸೋಮವಾರ ಸಿಎಲ್‌ಪಿ ಸಭೆ ಖಾಸಗಿ ಹೋಟೆಲ್‌ನಲ್ಲಿ ನಡೆಯಿತು.

[illegible]

**ದೋಸ್ತಿ ಸರಕಾರ ಉಳಿಯುವುದು ಕಷ್ಟವೆಂದು ಪರೋಕ್ಷವಾಗಿ ಸಂದೇಶ ರವಾನಿಸಿದ ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕರೆಲ್ಲರೂ ಒಗ್ಗಟ್ಟಾಗಿ ರಬೇಕು. ಎಂತಹುದೇ ಪರಿಸ್ಥಿತಿ ಬಂದರೂ ಎದೆ ಗುಂದುವ ಅಗತ್ಯವಿಲ್ಲ. ಕಷ್ಟಕಾಲದಲ್ಲಿ ಪಕ್ಷದ ಸಂಘಟನೆಗೆ ಎಲ್ಲರೂ ಕೈಜೋಡಿಸುವಂತೆ ಸೂಚಿಸಿದರು ಎನ್ನಲಾಗಿದೆ. ಆದರೆ, ಸಚಿವ ಡಿ.ಕೆ. ಶಿವಕುಮಾರ್ ಮಾತ್ರ ಸರಕಾರ ಉಳಿಯುತ್ತದೆ. ಕಡೆಯವರೆಗೂ ಈ ನಿಟ್ಟಿನಲ್ಲಿ ಪ್ರಯತ್ನಿಸಲಾಗುತ್ತದೆ. ಶಾಸಕರ ಕೆಲಸವನ್ನೂ ಮಾಡಿಸಿ ಕೊಡುವುದಾಗಿ ಹೇಳಿದರೆಂದು ತಿಳಿದು ಬಂದಿದೆ.**

ಜೆಡಿಎಸ್‌ನೊಂದಿಗಿನ ಮೈತ್ರಿ ಮುಂದುವರಿಸಿದರೆ ಪಕ್ಷದ ಪರಿಸ್ಥಿತಿ ಇನ್ನಷ್ಟು ಶೋಚನೀಯವಾಗಲಿದೆ. ಮೈಸೂರು ಪ್ರಾಂತ್ಯದಲ್ಲಿ ಜೆಡಿಎಸ್ ಸವಾರಿ ಮಾಡುತ್ತದೆ. ಉತ್ತರ ಕರ್ನಾಟಕ, ಕರಾವಳಿ-ಮಲೆನಾಡಿನಲ್ಲಿ ಬಿಜೆಪಿ ಪ್ರಾಬಲ್ಯದ ವಿರುದ್ಧ ಹೋರಾಡುವ ಸವಾಲಿದೆ. ಹಾಗಾಗಿ ಮೈತ್ರಿ ಕಡಿದುಕೊಂಡರೆ ಉಸಿರಾಡಬಹುದೆಂದು ಶಾಸಕರು ಸಲಹೆ ಕೊಟ್ಟರು ಎಂದು ತಿಳಿದು ಬಂದಿದೆ. ಬಿಜೆಪಿ ಸೇರ್ಪಡೆ ಪಟ್ಟಿಯಲ್ಲಿದ್ದಾರೆ ಎನ್ನಲಾದ ಸೌಮ್ಯಾರೆಡ್ಡಿ ಗೈರು ಹಾಜರಾಗಿದ್ದರು. ಆದರೆ ಡಾ.ಅಂಜಲಿ ನಿಂಬಾಳ್ಕರ್ ಭಾಗಿಯಾಗಿದ್ದರು. ಆದರೆ ಈ ಇಬ್ಬರೂ ಶಾಸಕಿಯರು ಸದನಕ್ಕೆ ಹಾಜರಾಗಿದ್ದರು.

**ಪರಮೇಶ್ವರ್ ನಾಯ್ಕ್, ಪುಟ್ಟರಂಗಶೆಟ್ಟಿ ಜಟಾಪಟಿ:** ಖಾಸಗಿ ಹೋಟೆಲ್‌ನಲ್ಲಿ ಸಿಎಲ್‌ಪಿ ಸಭೆ ನಡೆದ ಬಳಿಕ ಕಾಂಗ್ರೆಸ್ ಶಾಸಕರು ವಿಧಾನಸೌಧದತ್ತ ಹೊರಡುವಾಗ ಸಚಿವರಾದ ಪಿ.ಟಿ.ಪರಮೇಶ್ವರ್ ನಾಯ್ಕ್ ಮತ್ತು ಪುಟ್ಟರಂಗಶೆಟ್ಟಿ ನಡುವೆ ಸಣ್ಣ ಜಟಾಪಟಿ ನಡೆಯಿತು. ಬಸ್ ಏರುವಂತೆ ಪರಮೇಶ್ವರ ನಾಯ್ಕ್ ಅವರಿಗೆ ಪುಟ್ಟರಂಗಶೆಟ್ಟಿ ಸೂಚಿಸಿದರು. ಸಿಟ್ಟು ಮಾಡಿಕೊಂಡ ನಾಯ್ಕ್ ತಾವು ಕಾರಿನಲ್ಲಿ ಬರುವುದಾಗಿ ಹೇಳಿದರೆಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

7